(ಆ) ಸಮಿತಿಯ ಸಲಹೆಗಳಾವುವು ಮತ್ತು ಆವುಗಳನ್ನು ಕಾರ್ಯರೂಪಕ್ಕೆ ತರಲು ಸರಕಾರವು ಕೈಗೊಂಡ ಕ್ರಮಗಳಾವುವು ?

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

(ಅ) ಇಲ್ಲ.

(ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ: ರಾಜ್ಯದಲ್ಲಿ ಹರಿಜನ-ಗಿರಿಜನ ವೈದ್ಯ ಪದವೀಧರರು.

ಪ್ರ. 128 (90) ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಹರಿಜನ-ಗಿರಿಜನ ವೈದ್ಯ ಪದವೀಧರರಿದ್ದಾರೆ ;

(ಆ) ಅವರಲ್ಲಿ ಎಷ್ಟು ಜನಕ್ಕೆ ಕೆಲಸ ಒದಗಿಸಲಾಗಿದೆ ? ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ ;

(ಇ) ಎಷ್ಟು ಜನ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿದ್ದಾರೆ ? ಅವರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ನಿರುದ್ಯೋಗಿ ವೈದ್ಯರುಗಳಿಗೆ ಕೆಲಸ ಕೊಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಎಷ್ಟು ದಿವಸದೊಳಗಾಗಿ ಉದ್ಯೋಗ ಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ?

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 615 ಶ್ರೀ ಆರ್. ಎನ್. ನಾಯ್ಕ.—

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಪ್ರ. 615 ಶ್ರೀ ಆರ್. ಎನ್. ನಾಯ್ಕ.—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮತ್ತು ಭಟ್ಕಳಕ್ಕೆ ಸೂಪರ್ ಡಿಲಕ್ಸ್ ಬಸ್ಸು ಓಡಿಸುವಂತೆ ಸಾರ್ವಜನಿಕರಿಂದ ಹಾಗೂ ಶಾಸಕರಿಂದ ಒತ್ತಾಯ ಬಂದಿದ್ದು, ಸರಕಾರದವರಿಗೆ ಗೊತ್ತಿದೆಯೇ ;

(ಆ) ಎಷ್ಟು ದಿನಗಳಿಂದ ಆ ಬೇಡಿಕೆ ಇದೆ. ಹಾಗೂ ಆ ಬಗ್ಗೆ ಏನು ಕ್ರಮ ಕೈಕೊಳ್ಳಲಾಗಿದೆ ;

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು).—

(ಅ) ಗೊತ್ತಿದೆ.

(ಆ) 1983ರ ಮಾರ್ಚಿ ತಿಂಗಳಿನಿಂದ ಬೇಡಿಕೆ ಇದೆ. ಜುಲೈ 1983ನೇ ತಿಂಗಳಿನಿಂದ ಎರಡು ಆರೆ ಸುಖಾಸೀನ ವಾಹನಗಳನ್ನು ಭಟ್ಕಳ ಒಂಗಳೂರು ಮಾರ್ಗದಲ್ಲಿ ಓಡಿಸಲಾಗುತ್ತಿದೆ. ಈ ಆರೆ ಸುಖಾಸೀನ ವಾಹನಗಳು ಜನಪ್ರಿಯವಾದಮೇಲೆ ಈ ಮಾರ್ಗದಲ್ಲಿ ಸುಖಾಸೀನ ವಾಹನವನ್ನು ಓಡಿಸುವ ಬಗ್ಗೆ ತೀರ್ಮಾನಿಸಲಾಗುವುದು.

ವಿಷಯ: ಅರಸೀಕೆರೆ ಆಸ್ಪತ್ರೆಯನ್ನು 80 ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಮಾಡುವುದು.

ಪ್ರ. 129 (41) ಶ್ರೀ ಬಸವರಾಜು (ಅರಸೀಕೆರೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ ;

(ಅ) ಅರಸೀಕೆರೆ ಪಟ್ಟಣದಲ್ಲಿ ಈಗಿರುವ ಆಸ್ಪತ್ರೆಯನ್ನು 80 ಹಾಸಿಗೆಗಳುಳ್ಳ ಆಸ್ಪತ್ರೆಯಾಗಿ ಪರಿವರ್ತಿಸಲು ಸರ್ಕಾರಕ್ಕೆ ಶಿಫಾರಸು ಬಂದಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆಹಾರ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಇಲ್ಲ. ಈ ಆಸ್ಪತ್ರೆಗೆ ಈಗಾಗಲೇ 97 ಹಾಸಿಗೆಗಳಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ವಿಷಯ: ಸಿಮೆಂಟ್ ಧೂಳು ಮತ್ತು ಕೊಳಚೆ ನೀರಿನಿಂದ ಗಾಳಿ ಮತ್ತು ನೀರು ಮಲಿನವಾಗುತ್ತಿರುವ ಬಗ್ಗೆ.

ಪ್ರ. 130 (82) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

(ಅ) ಮೈಸೂರು ಸಿಮೆಂಟ್ ಲಿಮಿಟೆಡ್, ಅಮ್ಮಸಂದ್ರ, ಕಾರ್ಖಾನೆಯವರು ಹೊರಬಿಡುವ ಸಿಮೆಂಟ್ ಧೂಳಿನಿಂದ ಮತ್ತು ಹರಿಹರ ಪಾಲಿಫೈಬರ್ ಲಿಮಿಟೆಡ್, ಹರಿಹರ ಕಾರ್ಖಾನೆಯಿಂದ ನದಿಗೆ ಸೇರುತ್ತಿರುವ ಕೊಳಚೆ ನೀರಿನಿಂದ ಗಾಳಿ ಮತ್ತು ನೀರು ಮಲಿನವಾಗುತ್ತಿದೆಯೆ ಎಂದು ಸರ್ಕಾರಕ್ಕೆ ತಿಳಿದಿದೆಯೆ ;